

ಅನಿಸಿತ್ತು. ದಿನವೂ ಬೆಳಗಿನ ಎಂಟು ಎಂಟೂವರೆ ಹೊತ್ತಿಗೆ ಬೆಂಗಳೂರಿನಿಂದ ಮಕ್ಕಳ ಫೋನ್ ಕರೆಯ ಸಮಯ. ತಂದೆ ತಾಯಿ ಇಂಥ ಹೊತ್ತಿನಲ್ಲಿ ಆರೋಗ್ಯದ ಕುರಿತು ಸ್ವತಂತ್ರವಾಗಿ ಅವರೇ ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕಾಗಿದೆ ಎಂದು ಮಕ್ಕಳ ಚಿಂತೆ. ಮಾಸ್ತರರೇ ಹುರುಪಿನ ಮಾತಾಡಿ ಮಕ್ಕಳನ್ನು ಸಮಾಧಾನಗೊಳಿಸುತ್ತಿದ್ದರು.ಮಾತು ಬದಲಾಯಿಸಿ ಇವರೂ ಮೊಮ್ಮಕ್ಕಳ ಆಟ–ಪಾಠ ಕುರಿತು ಕೇಳಿ ತಿಳಿಯುತ್ತಿದ್ದರು. ಈ ಮಾತುಕತೆ ಬಿಟ್ಟರೆ ಇಡೀ ದಿನ ಅವರಿಬ್ಬರೇ. ಕಳೆದ ಮೂರು ನಾಲ್ಕು ತಿಂಗಳುಗಳು ಒಂದು ಬಗೆಯ ಏಕಾಂತವಾಸದಲ್ಲಿ ಕಳೆದಿವೆ. ಅನಾಮಿಕ ಅಗೋಚರ ಅಗಮ್ಯ ವೈರಾಣುವಿನ ಬಗೆಗೆ ಸದಾ ಎಚ್ಚರದಲ್ಲೇ ಇದ್ದಾರೆ, ಯಾವ ಹಂತದಲ್ಲೂ ಅಲಕ್ಷ್ಯ ಮಾಡಿಲ್ಲ.

ಇಷ್ಟು ದಿನಗಳ ತಮ್ಮ ಜೀವನವೇ ಸುಳ್ಳೆನ್ನುವಂತೆ ಹೊಸ ಬಗೆಯ ಗೃಹ ಬಂಧನಕ್ಕೊಳಗಾದಂತೆ ಉಪಾಧ್ಯಾಯರಿಗೆ ಭಾಸವಾಗುವುದು. ಬಾಯಿಗೆ ಬಟ್ಟೆ ಕಟ್ಟಿ ಜನರಿಂದ ದೂರ ನಿಂತು ಮಾತನಾಡುವುದು ಯಾವುದೋ ವ್ರತಾಚರಣೆಯಂತೆ ಕಾಣುತ್ತಿತ್ತು. ಮನೆಗೆ ಕೆಲಸದವಳು ಬರುವುದೂ ಬೇಡ ಎಂದು ಮಕ್ಕಳು ಸೂಚಿಸಿದ ಕಾರಣ ಕಮಲಕ್ಕನ ಮನೆಗೆಲಸ ಹೆಚ್ಚಾಗಿದೆ. ಉಪಾಧ್ಯಾಯರೂ ಕೈ ಜೋಡಿಸುತ್ತಾರೆ. ಆದರೆ ತಾವು ಯಾಕಾಗಿ ಇಷ್ಟೆಲ್ಲ ಕಷ್ಟಪಡುತ್ತಿರುವುದು ಎಂದು ಕೆಲವು ಸಲ ಸೋಜಿಗಪಡುತ್ತಾರೆ. ಏನಾಗಬೇಕೋ ಅದನ್ನು ಯಾರಾದರೂ ಬದಲಾಯಿಸಲು ಸಾಧ್ಯವಿದೆಯೇ ಎಂದು ತತ್ವಶಾಸ್ತ್ರಕ್ಕೊಲಿದ ಅವರ ಮನಸು ರಾಗ ತೆಗೆಯುತ್ತದೆ. ಇಂಥ ಮಾತುಗಳಿಗೆ ಅವರಿಬ್ಬರಿಗೂ ಪುರುಸೊತ್ತು ಸಂಜೆ ಹೊತ್ತಿಗೆ.

‘ಕಮಲಾ, ಮನೆ ಎಂದು ಯಾವುದೇ ವಿನಾಯಿತಿ ಇಲ್ಲ. ಇಲ್ಲಿಯೂ ನಾವು ಬಾಯಿಗೆ ಬಟ್ಟೆ ಕಟ್ಟಿಕೊಂಡು ಇರಬೇಕು, ಅದನ್ನು ತೆಗೆಯುವಾಗ ನನ್ನ ಅನುಮತಿ ಪಡೆಯಬೇಕು. ಯಾವಾಗಲೂ ನೀನು ಮಾಸ್ಕ್ ಹಾಕಿಕೊಂಡೇ ಮಾತನಾಡಬೇಕು, ಅದರಿಂದ ನಿನ್ನ ಮಾತುಗಳೂ ಸೋಸಿಕೊಂಡು ಹೊರಬರುತ್ತವೆ. ಮೊದಲಿನಿಂದಲೂ ನಾನು ಹೇಳುತ್ತಿದ್ದೆ ನೋಡು, ಯೋಚಿಸಿ ಮಾತನಾಡಬೇಕು, ಎಂದು. ಯಾರೂ ನನ್ನ ಮಾತು ಕೇಳಲಿಲ್ಲ. ಈಗ ಪ್ರಕೃತಿಯೇ ಪಾಠ ಹೇಳುತ್ತಿದೆ: ಮಾತನಾಡುವುದು, ತಿನ್ನುವುದು ಎಲ್ಲವನ್ನೂ ನಿಯಂತ್ರಣದಲ್ಲಿ ಇಡಬೇಕು ಎಂದು. ಅದಕ್ಕೇ ಈ ತಡೆಪಟ್ಟಿ ಕಮಲಾ. ಮನೆಯಲ್ಲೂ ನೀನು ಮೂಗು ಮುಚ್ಚಿರಬೇಕು, ಇದರಲ್ಲೂ ನಿಸರ್ಗದ ಸಂದೇಶ ಇದೆ. ಈಗ ಸೋಸಿಯಾದರೂ ಉಸಿರಾಡಬಹುದು, ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ಪ್ರಕೃತಿಮಾತೆ ದುರುಳ ಮಾನವರ ಉಸಿರುಗಟ್ಟಿಸಲು ಹೊರಟಾಳು. ತಸ್ಮಾತ್ ಜಾಗೃತ ಜಾಗೃತ...’ ಇವನ್ನೆಲ್ಲ ಒಂದೇ ಸಲ ಹೇಳಿದರೆಂದಲ್ಲ. ಮಾಸ್ತರರು ಆಗಾಗ ಕಮಲಕ್ಕನ ಮೇಲೆ ನಡೆಸುವ ಶಬ್ದಪ್ರಹಾರಗಳು ಇವು.

ಕಮಲಕ್ಕ ಏನೂ ಸುಮ್ಮನಿರುವ ಪೈಕಿ ಅಲ್ಲ. ‘ನೀವು ಮಾಸ್ತರಿಕೆನೇ ಶುರು ಮಾಡಿದ್ರಿ’ ಎಂದು ತನ್ನ ಮಾತಿನ ಸಣ್ಣ ಬಾಣಗಳಿಂದ ಚುಚ್ಚುವಳು. ‘ಅದೆಲ್ಲ ಇರಲಿ, ನಾನು ಹೇಳಿದಂತೆ ಕೇಳಬೇಕಾಗುತ್ತದೆ, ಇಲ್ಲವಾದರೆ ಸರಕಾರದ ಗಮನಕ್ಕೆ ತರಬೇಕಾಗುತ್ತದೆ’ ಎಂದು ಮಾಸ್ತರರು ಸರಕಾರಿ ಆದೇಶಗಳ ಒಕ್ಕಣಿಕೆಯ ಶೈಲಿಯಲ್ಲಿ ಹೇಳುವರು.

‘ಓಹೋಹೋ, ತಿಳಿಸಿ, ತಿಳಿಸಿ, ನನ್ನನ್ನು ಜೈಲಿಗೆ ಹಾಕಲಿ, ಆಮೇಲೆ ಎಲ್ಲ ಕೆಲಸ ನೀವೊಬ್ಬರೇ ಮಾಡಿಕೊಂಡು ಇಲ್ಲೇ ಬಿದ್ದಿರಿ’ ಎನ್ನುತ್ತಾ ಕಮಲಕ್ಕ ಮೂಗಿನ ಕವಚ ಕೈಗೆ ತೆಗೆದುಕೊಂಡರು. ‘ಚಾ ಕುಡಿಯಕಾರೆ ಒಂದು ಸಲ ತೆಕ್ಕಂಡಿದ್ದೆ, ಅಷ್ಟಕ್ಕೇ ನಿಮ್ಮದು ಇಷ್ಟು ಪುರಾಣ’ ಎನ್ನುತ್ತಾ ಕಮಲಕ್ಕ ಮೌನವ್ರತದ ದೀಕ್ಷಾಸಂಕೇತದಂತೆ ಇರುವ ಆ ನಾಸಿಕವಸ್ತ್ರವನ್ನು ಸುತ್ತಿಕೊಂಡರು.

‘ಈಗ ಸರಿಹೋಯಿತು, ಕೊರೊನಾ ವೈರಸ್ ಇಲ್ಲೇ ಸುತ್ತಮುತ್ತ ಓಡಾಡ್ತಾ ಇರಬಹುದು ಮಾರಾಯ್ತಿ’ ಎಂದು ಅರೆಗಾಂಭೀರ್ಯ, ಅರೆ ತಮಾಷೆಯ ಧ್ವನಿಯಲ್ಲಿ ಉಪಾಧ್ಯಾಯರು ಹೇಳಿದರು. ‘ಧೈರ್ಯ ಇದ್ದರೆ ಸರಿಯಾಗಿ ಒಂದು ರೂಪ ತಕಂಡು ಎದುರಿಗೆ ಬರ್ಲಿ. ಇಲಿ, ಜಿರಲೆ ಚಚ್ಚಿ ಹಾಕ್ದ ಹಾಂಗೆ ಸಾಯಿಸಿಬಿಡತ್ನಿಲ್ಯಾ’ ಎಂದು ವೀರಯೋಧನಂತೆ ಸಾರಿದರು ಕಮಲಕ್ಕ.

‘ಗ್ರಹಚಾರ ನೋಡು ಅದಕ್ಕೆ, ಇಡೀ ವಿಶ್ವಾನೆ ತುಂಬಿ ಹೋಜಡ, ಒಂದು ರೂಪ ತಕಳೋ, ನಿನ್ನಿಂದ ಸಾಯೋ! ಮಳ್ಳಿ, ಅದ ಸಾಯ್ತಿಲ್ಯೆ, ನಂಗಳನ್ನ ಸಾಯಿಸುಲೆ ಬಂದದ್ದು’ ಎಂದು ಉಪಾಧ್ಯಾಯರು ಏಕದಮ್ ಗಂಭೀರರಾದರು. ಮರುಕ್ಷಣದಲ್ಲೇ ತಮ್ಮ ಹಾಸ್ಯದ ನಿಜನೆಲೆಗೆ ಬಂದು ತಲುಪಿದರು. ಹೆದರಿಕೊಂಡು ಮಾತನಾಡುವವರಂತೆ ದನಿ ತಗ್ಗಿಸಿ ಹತ್ತಿರ ಬಂದು ಹೇಳಿದರು: ‘ನಂಗೆ ನೀ ಬೇಕೇ ಪುಣ್ಯಾತಗಿತ್ತಿ, ಇಲ್ಲೆ ಅಂದ್ರೆ ಬೆಳಿಗ್ಗೆ ಎದ್ದು ಐದು ಆರು ತೆಳ್ಳವು,